ಸಿಸಿ ನಂ. 159/2022 ಪಿಡಬ್ಲೂ :2

ದಿನಾಂಕಃ 22-10-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಪಿ ಜಿ ಹೆಚ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಅಧಿಕಾರ ಪತ್ರ ನಿಪಿ-1, ಚೆಕ್ ನಿಪಿ-2 ಎಂದು, ಆರೋಪಿಯ ಸಹಿ 2(ಎ) ಎಂದು , ಬ್ಯಾಂಕಿನ ಹಿಂಬರಹ ನಿಪಿ-3 ಎಂದು, ವಕೀಲರ ಕಚೇರಿಯ ನೋಟಿಸಿನ ಪ್ರತಿ ನಿಪಿ-4 ಎಂದು, ಅಂಚೆ ರಸೀದಿ ನಿಪಿ-5 ಎಂದು, ಅಂಚೆ ಸ್ವೀಕೃತಿ ನಿಪಿ -6 ಎಂದು, ಸರ್ಟಿಫಿಕೇಟ್ ನೋಂದಿಗೆ ಖಾತಾ ಉತಾರನ್ನು ನಿಪಿ-7 ಎಂದು, ಸಾಲದ ಬೇಡಿಕೆಯ ಅರ್ಜಿಯ ಯಥಾ ನಕಲನ್ನು ನಿಪಿ -8 ಎಂದು, ಸಾಲ ಮಂಜೂರಾತಿ ತಿಳುವಳಿಕೆ ಪತ್ರದ ಯಥಾ ನಕಲನ್ನು ನಿಪಿ -9 ಎಂದು, ಎರಡು ಜಾಮೀನುದಾರರ ಮಾಹಿತಿಗಳ ಯಥಾ ನಕಲುಗಳನ್ನು ನಿಪಿ-10 ಮತ್ತು 11 ಎಂದು, ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ-12 ಎಂದು, ಡಿಮಾಂಡ ಪ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ-13 ಎಂದು, ಜಾಮೀನು ಹಾಗೂ ಪೂರಕ ಭದ್ರತೆಯಿಂದ ಪಡೆದ ಸಾಲದ ಕರಾರಿನ ಯಥಾ ನಕಲನ್ನು ನಿಪಿ -14 ಎಂದು ಗುರುತಿಸಲಾಯಿತು.

(ಸಾಕ್ಷಿ ನಿಪಿ-8 ರಿಂದ ನಿಪಿ-14 ರ ದಾಖಲಾತಿಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ಯಥಾ ನಕಲುಗಳೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು).

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.

ಸಿಸಿ ನಂ. ಪಿಡಬ್ಲೂ :1

ದಿನಾಂಕಃ 07-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀಮತಿ ಆರ್ ಜಿ ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಫಿರ್ಯಾದುದಾರ ಪರ ವಕೀಲರು ಮುಂಚೆ ಹಾಜರು ಪಡಿಸಿದ್ದ ದಾಖಲೆಗಳನ್ನೇ ನಿಶಾನೆಯಾಗಿ ಪರಿಗಣಿಸಲು ಕೋರಿದ ಮೇರೆಗೆ ದಾಖಲಾತಿಗಳನ್ನು ಈಗಾಗಲೇ ನಿಪಿ -1 ರಿಂದ ನಿಪಿ-14 ಎಂದು ಗುರುತಿಸಲಾಗಿದ್ದು ಸಾಕ್ಷಿ ಈಗಿನ ಹಾಜರು ಪಡಿಸಿದ ಅಧಿಕಾರ ಪತ್ರವನ್ನು ನಿಪಿ -15 ಎಂದು ಗುರುತಿಸಲಾಯಿತು . ಹೈಪೋಥಿಕೇಶನ ಡೀಡ್ ನ ಯಥಾ ನಕಲನ್ನು ನಿಪಿ -16 ಎಂದು ಗುರುತಿಸಲಾಯಿತು.

(ಸಾಕ್ಷಿ ಸದರಿ ದಾಖಲಾತಿಯ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ಯಥಾ ನಕಲಿನೊಂದಿಗೆ ತಾಳೆ ಮಾಡಿ ನೋಡಲಾಗಿ , ಸರಿಯಿದ್ದು ಮೂಲ ಪ್ರತಿಯನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಗಿದೆ )

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪಿಡಬ್ಲ್ಯೂ2

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.